## <u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ , ಮೈಸೂರು.</u>

## <u>SC.261/2021</u>

**P.W.-09**
**C.W.-11**

| | | |
|---|---|---|
| ಹೆಸರು | : | Pallavi |
| ಗಂಡನ ಹೆಸರು | : | Mahesh |
| ವಯಸ್ಸು | : | 32 Years |
| ಉದ್ಯೋಗ | : | Tailor |
| ವಾಸಸ್ಥಳ | : | Kempaiahna Hundi, T.Narasipura |

**ದಿನಾಂಕಃ 16.03.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನ್ಯಾಯಾಲಯದಲ್ಲಿರುವ ಆರೋಪಿ ನನ್ನ ಗಂಡ. ಮೃತ ಲಕ್ಷ್ಮಮ್ಮ ನನ್ನ ಅತ್ತೆ. ಚಾಸಾ-1 ನನ್ನ ಭಾವ. ಚಾಸಾ-2 ನನ್ನ ಮಗ. ಚಾಸಾ-3 ನನ್ನ ಭಾವನ ಮಗ. ಚಾಸಾ-12 ನನ್ನ ಭಾವನ ಹೆಂಡತಿ.

2. ನನ್ನ ಮತ್ತು ಆರೋಪಿಯ ಮದುವೆಯಾಗಿ 15 ವರ್ಷಗಳಾದವು. ಮದುವೆಯಾದ ನಂತರ ನಾನು ಬನಹಳ್ಳಿಯ ನನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದೆವು. ನಮಗೆ ಇಬ್ಬರು ಮಕ್ಕಳು. ಮೋಹನ್ ಮತ್ತು ಮಹಾಲಕ್ಷ್ಮೀ ಎಂದು. ನಾವು, ಚಾಸಾ-1 ರವರ ಕುಟುಂಬ ಮತ್ತು ನಮ್ಮ ಅತ್ತೆ ಬೇರೆ ಬೇರೆ ವಾಸ ಮಾಡುತ್ತಿದ್ದೆವು. ನಮ್ಮ ಮನೆಗಳು ಅಕ್ಕಪಕ್ಕದಲ್ಲೇ ಇದ್ದವು. ನನ್ನ ಅತ್ತೆ, ನಮ್ಮ ಭಾವನವರೊಂದಿಗೆ ವಾಸ ಮಾಡುತ್ತಿದ್ದರು. ನನ್ನ ಭಾವನ ಮೊದಲನೇ ಹೆಂಡತಿ ಮೃತ ಪಟ್ಟಿದ್ದರು. ನಂತರ ಅವರು ಇನ್ನೊಂದು ಮದುವೆಯಾದರು. ಆ ಎರಡನೇ ಹೆಂಡತಿ, ಭಾವನೊಂದಿಗೆ ನಮ್ಮ ಅತ್ತೆ ಇರುತ್ತಿದ್ದರು. ನಮ್ಮ ಮಾವ ಚಾಸಾ-9 ರವರು ಸಹ ಅವರೊಂದಿಗೆ ವಾಸ ಮಾಡುತ್ತಿದ್ದರು.

3. ನನ್ನ ಅತ್ತೆ ಮೃತ ಪಡುವ 3 ತಿಂಗಳ ಹಿಂದೆ ನನ್ನ ಗಂಡನಿಗೆ ಅಪಘಾತವಾಗಿತ್ತು. ಆ ಅಪಘಾತದಲ್ಲಿ ನನ್ನ ಗಂಡನ ತಲೆಯ ಹಿಂಭಾಗಕ್ಕೆ ಪೆಟ್ಟಾಗಿ ಕಿವಿಯಿಂದ ರಕ್ತ ಬಂದಿತ್ತು. ಈ ಬಗ್ಗೆ ನನ್ನ ಗಂಡ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿದ್ದರು.

4. ದಿಃ29.07.2021 ರಂದು ಸಂಜೆ 5.45 ಗಂಟೆಯ ಸಮಯಕ್ಕೆ ನನ್ನ ಗಂಡ, ಅತ್ತೆ ಎಲ್ಲರೂ ನಮ್ಮ ಮನೆಯ ಮುಂದೆಯೇ ಕುಳಿತು ಮಾತನಾಡುತ್ತಿದ್ದರು. ನಂತರ ಎಲ್ಲರೂ ನನ್ನ ಭಾವನ ಮನೆಗೆ ಹೋದರು. ನಾನು ನಮ್ಮ ಮನೆಯಲ್ಲಿ ಇದ್ದೆ. ಆಗ ಮಕ್ಕಳು ಕಿರುಚಿಕೊಂಡ ಶಬ್ದ ನನಗೆ ಕೇಳಿಬಂತು. ಆಗ ಸಮಯ ಸಂಜೆ 6.00 ಗಂಟೆಯಾಗಿತ್ತು. ನಾನು ಮನೆಯಿಂದ ಓಡಿ ಹೋಗಿ ನೋಡಿದೆ. ನನ್ನ ಅತ್ತೆ ರಸ್ತೆಯ ಬಿದ್ದಿದ್ದರು. ಆಗ ನಾನು ಮಕ್ಕಳಾದ ಮೋಹನ್ ಮತ್ತು ಯಶವಂತನನ್ನು ಏನಾಯಿತು ಎಂದು ಕೇಳಿದೆ. ಆಗ ನನ್ನ ಮಗ ಮೋಹನ ಹೇಳಿದ, ಯಶವಂತ ಅವನ ತಂದೆಯ ಮೊಟಾರ್ ಸೈಕಲನ್ನು ತೊಳೆಯುತ್ತಿದ್ದಾಗ, ನನ್ನ ಗಂಡ ನನ್ನ ಮೊಟಾರ್ ಸೈಕಲನ್ನು ತೊಳೆಯದೇ, ನಿನ್ನ ಅಪ್ಪನ ಗಾಡಿ ತೊಳೆಯುತ್ತಿದ್ದೀಯಲ್ಲಾ ಎಂದು ಹೇಳಿ, ಆತನನ್ನು ಹೊಡೆಯಲು ಹೋದರಂತೆ, ಆಗ ನನ್ನ ಅತ್ತೆ, ತಾಯಿಯಿಲ್ಲದ್ದ ತಬ್ಬಲಿ ಮಕ್ಕಳನ್ನು ಹೊಡೆಯಲು ಹೋಗುತ್ತಿದ್ದೀಯಲ್ಲಾ ಎಂದು ಒಂದು ದಪ್ಪವಾದ ದೊಣ್ಣೆಯನ್ನು ತೆಗೆದುಕೊಂಡು ಬಂದರಂತೆ, ಆಗ ನನ್ನ ಗಂಡ ಅದೇ ದೊಣ್ಣೆಯನ್ನು ಆಕೆಯ ಕೈನಿಂದ ಕಿತ್ತುಕೊಂಡು, ನನ್ನ ಅತ್ತೆಗೆ, 'ನೀನು ಆತನಿಗೆ ಸಪೋರ್ಟ್ ಮಾಡುತ್ತೀಯಾ, ನನಗೆ ಹುಷಾರು ಇಲ್ಲದಿದ್ದರು ಸಹ ನನ್ನನ್ನು ನೋಡಿಕೊಳ್ಳುವುದಿಲ್ಲ' ಎಂದು ಹೇಳಿ ಹೊಡೆದರು, ಎಂದು ನನ್ನ ಮಗ ಮೋಹನ ನನಗೆ ತಿಳಿಸಿದ. ನಾನು ನೋಡಿದಾಗ ನನ್ನ ಗಂಡ ನಂಜನಗೂಡಿನ ರಸ್ತೆಯ ಕಡೆಗೆ ಹೋಗುತ್ತಿದ್ದರು. ಆಗ ಅಕ್ಕಪಕ್ಕದ ಮನೆಯವರಾದ ನಾಗರಾಜು, ಶಿವಮ್ಮ, ಮಹದೇವ ಎಲ್ಲರೂ ಬಂದರು. ನನ್ನ ಅತ್ತೆಯ ತಲೆಯ ಹಿಂಭಾಗಕ್ಕೆ ಏಟಾಗಿತ್ತು, ಎಡಕಣ್ಣು, ಹಣೆ, ಕೆನ್ನೆಯ ಮೇಲೆ ಏಟಾಗಿತ್ತು. ನಾವು ನೀರು ಕುಡಿಸಿದೆವು, ಅಷ್ಟರಲ್ಲಿ ಅತ್ತೆ ಮೃತ ಪಟ್ಟರು. ನಂತರ ನಾವು ನಮ್ಮ ಅತ್ತೆಯನ್ನು, ನಮ್ಮ ಮನೆಯ ಜಗುಲಿಯ ಮೇಲೆ ಮಲಗಿಸಿದೆವು. ಸ್ವಲ್ಪ ಹೊತ್ತಾದ ನಂತರ ನಮ್ಮ ಭಾವ ಬಂದರು. ಅವರ ಗೂಡ್ಸ್ ಆಟೋದಲ್ಲಿ ನಮ್ಮ ಅತ್ತೆಯ ಶವವನ್ನು ಸರ್ಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋದರು. ನಂತರ ಮರುದಿನ ನಾವು ಟಿ.ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಶವವನ್ನು ನೋಡಲು ಹೋದೆವು. ಶವವನ್ನು ನಮಗೆ ಹಸ್ತಾಂತರಿಸುವಾಗ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡರು.

5. ನನ್ನ ಅತ್ತೆ ಬಿದ್ದಿದ್ದ ಸ್ಥಳದಲ್ಲಿ ಬಳೆಯ ಚೂರುಗಳು, ದೊಣ್ಣೆ ಬಿದ್ದಿದ್ದವು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಬಳೆಯ ಚೂರುಗಳನ್ನು ಮತ್ತು ದೊಣ್ಣೆಯನ್ನು ಸಾಕ್ಷಿ ಗುರುತಿಸಿರುತ್ತಾರೆ. ದೊಣ್ಣೆಯನ್ನು ಈಗಾಗಲೇ ಮು.ಮಾ.1 ಎಂತಲೂ, ಬಳೆಯ

ಚೂರನ್ನು ಮು.ಮಾ.2 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಆ ದಿನ ನನ್ನ ಅತ್ತೆ ತೊಟ್ಟಿದ್ದ ಸೀರೆ, ರವಿಕೆ, ಲಂಗ,ಗಳನ್ನು ಈಗ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ಅನುಕ್ರಮವಾಗಿ ಮು.ಮಾ.3 ರಿಂದ 5 ಎಂದು ಗುರುತು ಪಡಿಸಿಕೊಳ್ಳಲಾಗಿದೆ. ಆ ದಿನ ನನ್ನ ಗಂಡ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಶರ್ಟ್ ಮತ್ತು ಪ್ಯಾಂಟನ್ನು ಸಾಕ್ಷಿ ನೋಡಿ, ತನ್ನ ಗಂಡನದ್ದೆಂದು ಗುರುತಿಸಿರುತ್ತಾರೆ. ಶರ್ಟನ್ನು ಮು.ಮಾ.6 ಎಂತಲೂ, ಪ್ಯಾಂಟನ್ನು ಮು.ಮಾ.7 ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

6. ನನ್ನ ಅತ್ತೆ ತೀರಿ ಹೋದ 1 ತಿಂಗಳ ನಂತರ ನಾನು ನನ್ನ ತವರು ಮನೆಗೆ ಹೋದೆ. 15 ದಿನಗಳಿಗೊಮ್ಮೆ ಬನ್ನಹಳ್ಳಿಗೆ ಹೋಗಿ ಬರುತ್ತೇನೆ.

**ಪಾಟೀಸವಾಲುಃ- ಆರೋಪಿಯ ಪರ ವಕೀಲರು ಪಾಟೀಸವಾಲಿಗಾಗಿ ಸಮಯ ಕೋರಿದ್ದು, ಸಮಯ ನೀಡಲು ನಿರಕಾರಿಸಿ ಪಾಟೀಸವಾಲು "ಇಲ್ಲ" ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.